ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER:

ದಿನಾಂಕ : DATE : 18/9/20

# ಸುಬ್ಬಯ್ಯ, ಬಣಕಾರ್‌ಗಿತ್ತು ಆಳಜ್ಞಾನ

**ಬೆಂಗಳೂರು:** ಎ.ಕೆ.ಸುಬ್ಬಯ್ಯ ಮತ್ತು ಡಾ.ಮಹಾದೇವ ಬಣಕಾರ್ ಅತ್ಯುತ್ತಮ ಸಂಸದೀಯ ಪಟುಗಳಾಗಿದ್ದರು ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಶನಿವಾರ ವಿಧಾನಸೌಧದಲ್ಲಿ ಹೇಳಿದರು.

ಈ ಇಬ್ಬರೂ ಸಂಸದೀಯ ಪಟುಗಳ ಕುರಿತು ವಿಧಾನಸಭೆ ಹೊರತಂದಿರುವ ಪುಸ್ತಕಗಳನ್ನು ಬಿಡುಗಡೆ ಮಾಡಿ ಅವರು ಮಾತನಾಡಿದರು.

ಸದನಗಳಲ್ಲಿ ಶಿಸ್ತು ಹಾಗೂ ವಿಷಯದ ಆಳ ಜ್ಞಾನದೊಂದಿಗೆ ಅದನ್ನು ಮಂಡಿಸುವ ಕೌಶಲ್ಯ ಈ ಇಬ್ಬರಿಗೂ ಇತ್ತು ಎಂದು ಅವರು ಹೇಳಿದರು.

ಈ ಇಬ್ಬರೂ ಸಂಸದೀಯ ಪಟುಗಳು ಎಲ್ಲ ಪೀಳಿಗೆಯ ರಾಜಕಾರಣಿಗಳಿಗೆ, ಅದರಲ್ಲೂ ವಿಶೇಷವಾಗಿ ಯುವ ತಲೆಮಾರಿನವರಿಗೆ ಮಾದರಿಯಾಗಿ ಉಳಿಯುತ್ತಾರೆ ಎಂದರು.

ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ಸಭಾಪತಿ ಪ್ರತಾಪಚಂದ್ರ ಶೆಟ್ಟಿ, ಉಪಸಭಾಧ್ಯಕ್ಷ ಆನಂದ ಚಂದ್ರಶೇಖರ ಮಾಮನಿ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಎಸ್.ಆರ್.ಪಾಟೀಲ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.



**ಎ.ಕೆ.ಸುಬ್ಬಯ್ಯ ಮತ್ತು ಡಾ.ಮಹಾದೇವ ಬಣಕಾರ್ ಕುರಿತ ಪುಸ್ತಕಗಳನ್ನು ಶನಿವಾರ ಬೆಂಗಳೂರಿನಲ್ಲಿ ಬಿಡುಗಡೆ ಮಾಡಲಾಯಿತು.**